ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 7
Total No. of Questions : 26 ] [ Total No. of Printed Pages : 7

**ಸಂಕೇತ ಸಂಖ್ಯೆ : 104-K (NS)**
**Code No. : 104-K (NS)**

# ಕಲಿಕೆಯನ್ನು ಅನುಕೂಲಿಸುವುದು (ಕಿ.ಪ್ರಾ.ಶಾ.)
# ಪ್ರಥಮ ಭಾಷೆ – ಕನ್ನಡ
# FACILITATING LEARNING ( LPS )
# FIRST LANGUAGE – KANNADA

**(ಹೊಸ ಪಠ್ಯವಸ್ತು)**
**(New Syllabus)**

ದಿನಾಂಕ : 07. 06. 2017 ]
Date : 07. 06. 2017 ]

ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60
Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

***ಸೂಚನೆಗಳು :*** i) ಪ್ರತಿ ಉತ್ತರವನ್ನು ಚಿಂತನೆ ಮಾಡಿ, ಸಂಘಟಿಸಿ ಬರೆಯಲು ಅನುಕೂಲವಾಗಬೇಕೆಂದು ಈ ಪತ್ರಿಕೆಗೆ ಉತ್ತರಿಸಲು 3 ಗಂಟೆಗಳ ಕಾಲಾವಕಾಶ ನೀಡಿದೆ.

ii) ಪ್ರತಿ ಪ್ರಶ್ನೆಗೂ ಸೂಚಿಸಿದಷ್ಟು ಉತ್ತರ ಮಾತ್ರ ಬರೆಯಿರಿ.

## ಭಾಗ – I

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : $10 \times 1 = 10$

1. ಪ್ರಾದೇಶಿಕ ಭಾಷೆಗಳಲ್ಲಿ ವೈವಿಧ್ಯತೆ ಇರಲು .......................... ಪರಿಸರ ಕಾರಣ.

(A) ಆರ್ಥಿಕ

(B) ಸಾಮಾಜಿಕ

(C) ಭೌತಿಕ

(D) ಗೊಂದಲಮಯ

2. ಸಂಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ .................... ದಾರಿದೀಪವಾಗುತ್ತದೆ.

(A) ಸಾಹಿತ್ಯದ ವಿವಿಧ ಪ್ರಕಾರಗಳು

(B) ಸಾಹಿತ್ಯದ ಒಂದೇ ಪ್ರಕಾರ

(C) ಸಾಹಿತ್ಯದ ಎರಡು ಪ್ರಕಾರಗಳು

(D) ಇತರೆ ಭಾಷೆಯ ಸಾಹಿತ್ಯದ ಒಂದು ಪ್ರಕಾರ

3. ವಿಷಯಗಳನ್ನು ಅರ್ಥೈಸಿಕೊಳ್ಳಲು ....................... ಅತೀ ಅವಶ್ಯಕ.

(A) ಆಯಾಾಯ ವಿಷಯಗಳ ಜ್ಞಾನ (B) ಪರಿಸರದ ಮೂಲಕ ಕಲಿಯುವ ಅವಕಾಶ

(C) ಭಾಷೆ (D) ಇವುಗಳೆಲ್ಲವೂ

4. ಮಗುವಿನ ಮೊದಲ ಕಲಿಕೆ ಅವರವರ .................... ಭಾಷೆಯಿಂದ ಆರಂಭವಾಗುವುದು ಒಳಿತು.

(A) ಮನೆ (B) ದೇಶ

(C) ಪ್ರಾದೇಶಿಕ (D) ಶಾಲಾ

5. ಭಾಷಾ ಅನುಭವ ಹಾಗೂ ಜೀವಾನುಭವ

(A) ಬೇರಬೇರೆಯಲ್ಲ

(B) ಬೇರೆಬೇರೆ

(C) ಜೀವಾನುಭವ ಭಾಷೆಯಿಂದ ಮಾತ್ರ ಸಾಧ್ಯ

(D) ಇವೆರಡರ ನಡುವಿನ ಕಂದಕ

6. ಪ್ರಾಥಮಿಕ ಹಂತದಲ್ಲಿ ಆಲಿಸುವಿಕೆಯನ್ನು ಅರ್ಥೈಸಿಕೊಳ್ಳಲು ಮಕ್ಕಳಿಗೆ ಎದುರಾಗುವ ಸಮಸ್ಯೆ

(A) ಸಂಪನ್ಮೂಲಭರಿತ ಪರಿಸರ (B) ಮುಕ್ತ ಸಂವಾದ

(C) ಉಚ್ಚಾರ ವ್ಯತ್ಯಾಸ (D) ದುಂಡಾದ ಬರವಣಿಗೆ

7. ಗಟ್ಟಿ ಓದಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿ ?

(A) ಗಟ್ಟಿ ಓದಿನಿಂದ ಕಡಿಮೆ ಸಮಯದಲ್ಲಿ ಹೆಚ್ಚು ಪಠ್ಯ ಓದಬಹುದು

(B) ಗಟ್ಟಿಯಾಗಿ ಓದಲು ಶ್ರಮ ಕಡಿಮೆ

(C) ಗಟ್ಟಿ ಓದಿಗೆ ಹೆಚ್ಚು ಶ್ರಮ ಬೇಕು

(D) ಗಟ್ಟಿಯಾಗಿ ಓದುವಾಗ ಉಚ್ಚಾರ ದೋಷ ಪತ್ತೆಹಚ್ಚುವುದು ಅಸಾಧ್ಯ

8. ಪೋಷಕರು ತಮ್ಮ ಮಕ್ಕಳ ಗುಣಮಟ್ಟದ ಶಿಕ್ಷಣದ ಮಾನದಂಡ ಗುರುತಿಸಿಕೊಳ್ಳಬೇಕಾದ್ದು

(A) ಇತರರ ಹೋಲಿಕೆಯಿಂದ (B) ವ್ಯಕ್ತಿತ್ವ ವಿಕಸನದಿಂದ

(C) ಗಳಿಸುವ ಅಂಕಗಳಿಂದ (D) ತರುವ ಪ್ರಶಸ್ತಿಗಳಿಂದ

9. ಮಕ್ಕಳನ್ನು ಮೌಲ್ಯಮಾಪನ ಮಾಡುವುದು

(A) ಕಲಿಕೆಯನ್ನು ಅನುಕೂಲಿಸಲು

(B) ಕಲಿಕೆಯ ಕುರಿತಂತೆ ತೀರ್ಪು ನೀಡಲು

(C) ವಿವೇಚನೆಯನ್ನು ಅಳತೆ ಮಾಡಲು

(D) ಪರೀಕ್ಷೆ ಬಗ್ಗೆ ಅವರ ಧೋರಣೆ ನಿರ್ಧರಿಸಲು

10. ಒಳಗೊಳ್ಳುವ ತರಗತಿಯಲ್ಲಿ ಮಕ್ಕಳ ಕಲಿಕೆಯ ಮಾಪನ ಇರಬೇಕಾದ್ದು

(A) ಒಂದೇ ರೀತಿ

(B) ಶಿಕ್ಷಕರಿಗೆ ಅನುಕೂಲವಾಗುವಂತೆ

(C) ವೈವಿಧ್ಯಮಯವಾಗಿ

(D) ಶಾಲೆಯ ನಿಯಮಾನುಸಾರ ಏಕರೂಪವಾಗಿ

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ಮಕ್ಕಳು ನಿರ್ಭೀತರಾಗಿ ಭಾಷೆ ಬಳಸುವ ಪರಿಸರವನ್ನು ಹೇಗೆ ನಿರ್ಮಾಣ ಮಾಡುತ್ತೀರಾ ? ವಿವರಿಸಿ.

12. 'ಕಥೆ' ನಮ್ಮ ಜೀವನದ ಅವಿಭಾಜ್ಯ ಅಂಗ ಏಕೆ ?

13. ಒಂದು ಪಠ್ಯದ ಅತೀ ಮುಖ್ಯ ಅಂಶಗಳನ್ನು ಗುರುತಿಸಲು ಸಮರ್ಥರನ್ನಾಗಿಸಲು ಆಯೋಜಿಸುವ ಯಾವುದಾದರೊಂದು ಚಟುವಟಿಕೆಯನ್ನು ಹಾಗೂ ಆಯೋಜಿಸುವ ರೀತಿಯನ್ನು ತಿಳಿಸಿ.

14. ಸಮಗ್ರವಾಗಿ ಓದುವ ಅಭ್ಯಾಸ ಬೆಳೆಸಲು 'ಶೀರ್ಷಿಕೆಗಳನ್ನು ಮಾತ್ರ ಆಧರಿಸಿ ಕಥೆ ಏನಿರಬಹುದೆಂದು ಊಹಿಸುವ ಚಟುವಟಿಕೆ' ಹೇಗೆ ಸಹಾಯಕವಾಗುತ್ತದೆ ?

15. ಒಂದು ಭಾಷಾ ತರಗತಿಯನ್ನು ಸಂಪನ್ಮೂಲಭರಿತ ತರಗತಿ ಎಂದು ಹೇಗೆ ನಿರ್ಧರಿಸುತ್ತೀರಾ ? ಎರಡು ಉದಾಹರಣೆ ಕೊಡಿ.

16. ಒಳಗೊಳ್ಳುವ ತರಗತಿಯಲ್ಲಿ ಪ್ರತೀ ಕಲಿಕಾ ಸನ್ನಿವೇಶಕ್ಕೂ ತೆಗೆದುಕೊಳ್ಳಬೇಕಾದ ಬೋಧನಾ ನಿರ್ಧಾರಗಳು / ಗಮನಿಸಬೇಕಾದ ಅಂಶಗಳು ಯಾವುವು ?

17. 'ಬಿಗ್‌ಬುಕ್' (ದೊಡ್ಡಪುಸ್ತಕ) ಭಾಷಾ ಕಲಿಕೆಯನ್ನು ಅನುಕೂಲಿಸಲು ಹೇಗೆ ಸಹಾಯಕವೆಂಬುದನ್ನು ತಿಳಿಸಿ.

18. ಈ ಕೆಳಗಿನ ಮಾದರಿಯಂತೆ ಮೂರಕ್ಷರದ ಪದಸಂಪತ್ತನ್ನು ಹೆಚ್ಚಿಸಲು ಎರಡು ಭಾಷಾ ಆಟಗಳನ್ನು ರಚಿಸಿ :

*ಮಾದರಿ :* ವಲ್ಲಭ
↙
ಭಗಿನಿ
↙
ನಿಗಮ
↙
ಮಧುರ

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ 'ಅ' ಅಥವಾ 'ಆ' ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ : $8 \times 5 = 40$

19. ಅ) ಆಟದಿಂದ ಕಲಿಕೆಯನ್ನು ಅನುಕೂಲಿಸಲು ಹೇಗೆ ಸಾಧ್ಯವೆಂಬುದನ್ನು ಎರಡು ಭಾಷಾ ಆಟಗಳ ಉದಾಹರಣೆಗಳೊಂದಿಗೆ ತಿಳಿಸಿ.

*ಅಥವಾ*

ಆ) ಯಾವುದಾದರೂ ಎರಡು ಜಾನಪದ ಆಟಗಳನ್ನು ಹೆಸರಿಸಿ. ಈ ಆಟಗಳ ಮೂಲಕ ಭಾಷಾ ಕಲಿಕೆಯ ಸಾಧ್ಯತೆಯನ್ನು ವಿವರಿಸಿ.

20. ಅ) ಆಲಿಸುವಿಕೆಯ ಅಭಿವೃದ್ಧಿಗೆ ನೀಡುವ ಎರಡು ಚಟುವಟಿಕೆಗಳನ್ನು ತಿಳಿಸಿ. ಈ ಚಟುವಟಿಕೆಗಳನ್ನು ಮೌಲ್ಯಾಂಕನ ಮಾಡಲು ಸೂಕ್ತವಾದ ಒಂದು ಮೌಲ್ಯಾಂಕನ ಸಾಧನ ರಚಿಸಿ.

*ಅಥವಾ*

ಆ) ಕಥೆಯನ್ನು ಆಲಿಸಿ ಅರ್ಥಮಾಡಿಕೊಂಡಿದ್ದಾರೆ ಎಂದು ತಿಳಿಯಲು ಶಿಕ್ಷಕರಾಗಿ ನೀವು ಮಕ್ಕಳಿಂದ ನಿರೀಕ್ಷಿಸುವ ಅಂಶಗಳಾವುವು ?

21. ಅ) ಈ ಕೆಳಗಿನ ಉಪಕೌಶಲಗಳನ್ನು ಅನುಕೂಲಿಸಲು ಒಂದೊಂದು ಚಟುವಟಿಕೆಯನ್ನು ಹೆಸರಿಸಿ. ಈ ಚಟುವಟಿಕೆಗಳ ಯೋಜನೆ, ಅನುಷ್ಠಾನ ಮತ್ತು ಮೌಲ್ಯಮಾಪನ ಹೇಗೆ ಮಾಡುವಿರಿ ಎಂಬುದನ್ನು ತಿಳಿಸಿ.

i) ಪದಗಳನ್ನು ಗುರುತಿಸುವುದು

ii) ಪದಗಳ ಅರ್ಥ ಗ್ರಹಿಸುವುದು

*ಅಥವಾ*

ಆ) **25 (ಅ)** ನಲ್ಲಿ ಕೊಟ್ಟಿರುವ ಕಥೆಯನ್ನು ಓದಿ, ಅದಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಐದು ಬಹು–ಆಯ್ಕೆ ಪ್ರಶ್ನೆಗಳನ್ನು ರಚಿಸಿ.

22. ಅ) ಈ ಕೆಳಗಿನ ಪದ್ಯ ಆಧರಿಸಿ ಯಾವುದಾದರೂ ಐದು ಬರೆಯುವ ಚಟುವಟಿಕೆಗಳನ್ನು ಪಟ್ಟಿಮಾಡಿ :

ಸಾಗರದ ನೀರು ಕಾದು ಆವಿಯಾಗಿ
ಮೇಲೆ ತಂಪಾಗಿ ಚಲಿಸುವುದು ಮೋಡವಾಗಿ
ಭಾರವಾಗಿ ಬೀಳುವುದು ಮಳೆಯಾಗಿ
ಮತ್ತೆ ಸಾಗರವ ಸೇರುವುದು ನದಿಯಾಗಿ

ಮೋಡದ ಹನಿ ಮೂಲಕ ಸೂರ್ಯನ ಕಿರಣ
ಆಗುವುದು ಅದರಲಿ ವಕ್ರೀಭವನ
ವರ್ಣ ವಿಭಜನೆ ಹೊಂದಿ ಏಳು ಬಣ್ಣ
ಕಾಮನ ಬಿಲ್ಲಾಗಿ ಕಾಣುವುದಣ್ಣ

ಹಿಂಗಾರು ಮುಂಗಾರು ಮಾರುತಗಳು
ಮೋಡಗಳ ಎಳೆದು ತಂದು ಮಳೆಯು ಬಂದು
ಬೆಳೆಗಳು ಬೆಳೆಯುವವು ಹುಲುಸಾಗಿ
ನಮ್ಮ ರೈತರ ಜೀವನ ಹರುಷವಾಗಿ

***ಅಥವಾ***

ಆ) 'ಬರವಣಿಗೆ ಚಿಂತನೆಯ ಮೂರ್ತರೂಪ' ಈ ಹೇಳಿಕೆಯನ್ನು ಸಮರ್ಥಿಸಿ.

23. ಅ) 'ಕಾಲ್ಪನಿಕ ಆಟಗಳೂ ಸಹ ತರಗತಿಯಲ್ಲಿ ಮಕ್ಕಳ ಸಹಜ ಸಂಪನ್ಮೂಲವಾಗಬಲ್ಲದು' ಈ ಹೇಳಿಕೆಯನ್ನು ಸಮರ್ಥಿಸಿ.

***ಅಥವಾ***

ಆ) 'ಮಕ್ಕಳಿಗೆ ಮೌಖಿಕ ಭಾಷಾ ಸಾಮರ್ಥ್ಯ ಸಿದ್ಧಿಸಿದರೆ ಸಾಕ್ಷರತೆಗೆ ಸುಗಮ ದಾರಿಯಾಗಬಲ್ಲದು' ಈ ಹೇಳಿಕೆಯನ್ನು ಕಾರಣೀಕರಿಸಿ.

24. ಅ) 'ನಲಿಕಲಿ' ಪದ್ಧತಿಯನ್ನು ಭಾಷಾ ಕಲಿಕೆಯನ್ನು ಸಮೃದ್ಧಗೊಳಿಸಲು ನೀವು ನೀಡುವ ಸಲಹೆಗಳಾವುವು ?

***ಅಥವಾ***

ಆ) ಯಾವುದಾದರೂ 5 ನಾಲಿಗೆ ಸುರುಳಿಗಳನ್ನು ಹೆಸರಿಸಿ. ಇವುಗಳನ್ನು ತರಗತಿಯಲ್ಲಿ ಯಾವ ಸಂದರ್ಭದಲ್ಲಿ, ಹೇಗೆ ಬಳಸುತ್ತೀರಾ ಎಂಬುದನ್ನು ತಿಳಿಸಿ.

25. ಅ) ಈ ಕೆಳಗಿನ ಕಥೆಗೆ ಪೂರಕವಾದ ಎರಡು ಚಿತ್ರಗಳನ್ನು ರಚಿಸಿ, ಶೀರ್ಷಿಕೆ ಕೊಡಿ :

ಒಂದು ಹೊಳೆಯ ಮೇಲ್ಭಾಗದಲಿ ಒಂದು ತೋಳ ನೀರನ್ನು ಕುಡಿಯುತ್ತಿತ್ತು. ಅದೇ ಸಮಯದಲ್ಲಿ ಹೊಳೆಯ ಕೆಳಭಾಗದಲ್ಲಿ ಒಂದು ಪುಟ್ಟ ಕುರಿಮರಿಯು ನೀರನ್ನು ಕುಡಿಯುತ್ತಿತ್ತು.

ಕುರಿಮರಿಯನ್ನು ತಿನ್ನಬೇಕೆಂದು ತೋಳಕ್ಕೆ ಆಸೆಯಾಯಿತು. ಅದು ಸುಮ್ಮನೆ ಜಗಳ ತೆಗೆಯಿತು. "ಏ ಕುರಿಮರಿ ನಿನಗೆಷ್ಟು ಕೊಬ್ಬು, ನಾನು ಕುಡಿಯುತ್ತಿರುವ ನೀರನ್ನು ಎಂಜಲು ಮಾಡುತ್ತೀದ್ದೀಯಾ" ಎಂದಿತು. "ತೋಳಣ್ಣ, ನೀನು ಕುಡಿದುಬಿಟ್ಟ ನೀರನ್ನು ನಾನು ಕುಡಿಯುತ್ತಿದ್ದೇನೆ. ಆದ್ದರಿಂದ ನೀನು ಕುಡಿಯುವ ನೀರು ಹೇಗೆ ಎಂಜಲಾಗುತ್ತದೆ." ಎಂದು ಕೇಳಿತು. ಅದಕ್ಕೆ ತೋಳ, "ಏ ಕುರಿಮರಿ, ನೀನು ನನ್ನನ್ನು ಒಂದು ವರ್ಷದ ಹಿಂದೆ ಬಯ್ದಿರಲಿಲ್ಲವೇ ?" ಎಂದಿತು. 'ಅಯ್ಯೋ ತೋಳಣ್ಣಾ ನಾನು ಹುಟ್ಟಿ ಇನ್ನೂ ಆರು ತಿಂಗಳಾಗಿಲ್ಲ. ವರ್ಷದ ಹಿಂದೆ ನಾನು ನಿನ್ನನ್ನು ಹೇಗೆ ಬಯ್ಯಲು ಸಾಧ್ಯ" ಎಂದು ಕೇಳಿತು ಕುರಿಮರಿ. ಕೊನೆಗೆ ತೋಳ "ನೀನು ಬಯ್ಯದಿದ್ದರೆ ಏನಾಯಿತು. ನಿನ್ನ ಅಪ್ಪ ನನ್ನನ್ನು ಬಯ್ದಿದ್ದ ಅದಕ್ಕೇ ನಿನ್ನನ್ನು ಬಿಡುವುದಿಲ್ಲ" ಎಂದು ಹೇಳಿ ಕುರಿಮರಿಯ ಮೇಲೆ ಹಾರಿತು.

***ಅಥವಾ***

ಆ) ಈ ಕೆಳಗಿನ ಯಾವುದಾದರೊಂದು ಪ್ರಾಣಿ ಅಥವಾ ಪಕ್ಷಿಗೆ ಸಂಬಂಧಿಸಿದ ಐದು ಸಾಲಿನ ಪದ್ಯ ಅಥವಾ ಒಗಟು ರಚಿಸಿ.

(ನಾಗರಹಾವು, ಗಿಳಿ, ಹುಲಿ, ನಾಯಿ, ಕೋಗಿಲೆ, ಗುಬ್ಬಿ)

26. ಅ) 'ಬಳಸುವ ಭಾಷೆ ಒಳಗೊಳ್ಳುವ ಅಥವಾ ಹೊರಗಿಡುವ ನಮ್ಮ ಚಿಂತನೆಯನ್ನು ಪ್ರತಿಫಲಿಸುತ್ತದೆ' ಹೇಗೆ ಎಂಬುದನ್ನು ಎರಡು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿ.

***ಅಥವಾ***

ಆ) ಮಂದಗತಿಯಲ್ಲಿ ಕಲಿಯುವವರನ್ನು ಒಳಗೊಳಿಸಲು ನೀವು ನೀಡುವ ಯಾವುದಾದರೂ ಐದು ಚಟುವಟಿಕೆಗಳನ್ನು ಹೆಸರಿಸಿ. ಆಯೋಜಿಸುವ ಸಂದರ್ಭವನ್ನು ಬರೆಯಿರಿ.